KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಡಿಸೆಂಬರ್ ೨, ೨೦೧೦ (ಮಾರ್ಗಶಿರ ೧೧ ಶಕ ವರ್ಷ ೧೯೩೨)	ಸಂಚಿಕೆ ೪೬

ಭಾಗ–೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಪ್ರಿಲಿಮಿನರಿ ಅಧಿಸೂಚನೆ

ಸಂ.ಕೆ.ಎಸ್.ಎ.:ಸಿಆರ್:15/09–10, ದಿನಾಂಕ:20ನೇ ಅಕ್ಟೋಬರ್, 2010

ಬೆಂಗಳೂರು ಪೂರ್ವ ತಾಲ್ಲೂಕು, ಸರ್.ಸಿ.ವಿ. ರಾಮನ್‌ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸುಧಾಮನಗರ ಭಾಗ–2ರ ಕೊಳಚೆ ಪ್ರದೇಶದ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರದೇಶದಲ್ಲಿ ಇರುವ ಮನೆಗಳು ಒತ್ತೊತ್ತಾಗಿದ್ದು ಜನರು ಸಾಮಾನ್ಯ ಸ್ಥಿತಿಯಲ್ಲಿ ವಾಸಿಸಲು ಅನಾನುಕೂಲ ಉಂಟಾಗಿದ್ದು, ಹಾಲಿ ಇರುವ ಗುಡಿಸಲುಗಳ ದುರಸ್ಥಿ ಇಲ್ಲದೇ ಕುಡಿಯುವ ನೀರು, ದೀಪ, ರಸ್ತೆ, ಚರಂಡಿ ಇತ್ಯಾದಿ ಮೂಲಭೂತ ಸೌಕರ್ಯಗಳಿಲ್ಲದ ಕಾರಣ ಅನಾರೋಗ್ಯಕರ ವಾತಾವರಣ ಉಂಟಾಗಿರುವುದನ್ನು ಅಧಿಕಾರಿಗಳು ವರದಿ ಮಾಡಿರುತ್ತಾರೆ. ಈ ಪ್ರದೇಶವು ಜನಸಂದಣಿಯಿಂದ ಕೂಡಿದ್ದು, ಮಾಲಿನ್ಯ ಮತ್ತು ಅನಾರೋಗ್ಯಕರ ವಾತಾವರಣದಿಂದ ಕೂಡಿರುವುದರಿಂದ ಈ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಸೆಕ್ಷನ್ 3 ರಡಿಯಲ್ಲಿ ಕೊಳಚೆ ಪ್ರದೇಶವೆಂದು ಘೋಷಿಸುವುದು ಅವಶ್ಯವೆಂದು ಕಂಡುಬಂದಿರುತ್ತದೆ.

ಏತನ್ಮಧ್ಯೆ ಸರ್ಕಾರದ ಸುತ್ತೋಲೆ ಸಂ.71 ಕೊಮಂಇ 2009, ದಿನಾಂಕ:24.02.2010ರಲ್ಲಿ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಕಲಂ 3 ಮತ್ತು 11ರಡಿಯಲ್ಲಿ ಜಿಲ್ಲಾಧಿಕಾರಿಗಳು, ಕೊಳಚೆ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸಿ ಅಧಿಸೂಚನೆ ಹೊರಡಿಸುವ ಮುನ್ನ ವಸತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರ ಅನುಮೋದನೆ ಪಡೆಯತಕ್ಕದ್ದೆಂದು ಸೂಚನೆಯಿದ್ದು, ಆ ಪ್ರಕಾರವಾಗಿ ಕೊಳಚೆ ಪ್ರದೇಶಗಳೆಂದು ಘೋಷಣೆ ಮಾಡಬೇಕಾದ ಪ್ರಸ್ತಾವನೆಗಳನ್ನು ಈ ಕಛೇರಿಯಿಂದ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ತದನಂತರದಲ್ಲಿ ಸರ್ಕಾರದ ಪತ್ರ ಸಂ.ವಇ 71 ಕೊಮಂಇ 2009, ದಿನಾಂಕ:12.07.2010ರ ಪತ್ರದಲ್ಲಿ ಕೊಳಚೆ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸುವ ಬಗ್ಗೆ ಇನ್ನು ಮುಂದೆ ಸರ್ಕಾರದ ಪೂರ್ವಾನುಮೋದನೆ ಕೋರಿ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸುವ ಬದಲು ದಿನಾಂಕ:02.07.2010ರಲ್ಲಿನ ಸೂಚನೆಯಂತೆ ಮತ್ತು ಹಾಲಿ ಅಸ್ತಿತ್ವದಲ್ಲಿರುವ ನಿಯಮಗಳಡಿಯ ಕಾರ್ಯವಿಧಾನವನ್ನನುಸರಿಸಿದಂತೆ ಕ್ರಮವಹಿಸಿ, ಅಧಿಸೂಚನೆ ಸಂಖ್ಯೆ: ವಇ 73 ಕೊಮಂಇ 2001, ದಿನಾಂಕ:26.06.2002ರಲ್ಲಿ ಜಿಲ್ಲಾಧಿಕಾರಿಗಳಿಗೆ ಪ್ರದತ್ತ ಮಾಡಲಾಗಿರುವ ಅಧಿಕಾರ ವ್ಯಾಪ್ತಿಯಲ್ಲಿ ಘೋಷಣೆಗೆ ಕ್ರಮವಹಿಸುವುದು ಎಂದು ಸರ್ಕಾರವು ನಿರ್ದೇಶನ ನೀಡಿ ಪ್ರಸ್ತಾವನೆಗಳನ್ನು ಹಿಂದಿರುಗಿಸಲ್ಪಟ್ಟಿರುತ್ತದೆ ಮತ್ತು ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಅವರಿಗೆ ಹಿಂದಿನಂತೆ ತಮ್ಮ ಕಛೇರಿಯ ಹಂತದಲ್ಲಿಯೇ ಕೊಳಚೆ ಪ್ರದೇಶಗಳ ಘೋಷಣೆಯನ್ನು ಮಾಡಲು ನಿರ್ದೇಶನ ನೀಡಿರುತ್ತದೆ.

ಆದ್ದರಿಂದ ಈ ಕೆಳ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನಾ) ಕಾಯ್ದೆ 1973ರ ಸೆಕ್ಷೆನ್ 3ರಡಿ ಜಿಲ್ಲಾಧಿಕಾರಿಗಳಿಗೆ ದತ್ತವಾಗಿರುವ ಅಧಿಕಾರದಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರು 'ಕೊಳಚೆ ಪ್ರದೇಶ' ವೆಂದು ಘೋಷಿಸಲು ಉದ್ದೇಶಿಸಿರುತ್ತಾರೆ.

ಮೇಲ್ಕಂಡ ಈ ಕ್ರಮದ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಶೇಷಾದ್ರಿಪುರ, ಬೆಂಗಳೂರು–20 ರವರಿಗೆ ಲಿಖಿತವಾಗಿ ಆಕ್ಷೇಪಣೆಗಳನ್ನು ಸಲ್ಲಿಸಲು ಈ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ (15) ಹದಿನೈದು ದಿವಸಗಳ ಕಾಲಾವಕಾಶ ನೀಡಲಾಗಿದೆ. ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್

ಬೆಂಗಳೂರು ಪೂರ್ವ ತಾಲ್ಲೂಕು ಸರ್.ಸಿ.ವಿ. ರಾಮನ್‌ನಗರ, ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸುಧಾಮನಗರ ಭಾಗ–2ರ ಕೊಳಚೆ ಪ್ರದೇಶದ ಚಕ್ಕುಬಂದಿ ಮತ್ತು ಹದ್ದುಬಸ್ತು ತಃಖ್ತೆ.

ಕ್ರ. ಸಂ.	ಕೊಳಚೆ ಪ್ರದೇಶದ ಹೆಸರು ಮತ್ತು ಸ್ಥಳ	ಕೊಳಚೆ ಪ್ರದೇಶದಲ್ಲಿರುವ ಜಮೀನಿನ ಮಾಲೀಕರ ಹೆಸರು	ಸರ್ವೆ ನಂ.	ವಿಸ್ತೀರ್ಣ ಎ.ಗುಂ.	ಚೆಕ್ಕುಬಂದಿಗಳು			
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9
1.	ಸುಧಾಮನಗರ ಭಾಗ–2ರ ಕೊಳಚೆ ಪ್ರದೇಶ, ಅಗ್ರಹಾರ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು.	ಹೆಚ್.ಎ.ಎಲ್.	72/2	1–20	ಹೆಚ್.ಎ.ಎಲ್. ಉಳಿಕೆ ಪ್ರದೇಶ	ಬಿ.ಡಿ.ಎ. ರಸ್ತೆ	ಪೇಜಾವರ ಶ್ರೀಗಳ ಪ್ರದೇಶ	ಹೆಚ್.ಎ.ಎಲ್. ನ ಉಳಿಕೆ ಪ್ರದೇಶ.

ಎಂ.ಕೆ. ಅಯ್ಯಪ್ಪ
ಪಿ.ಆರ್. 432 ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

ತಹಶೀಲ್ದಾರ್‌ರವರ ಕಾರ್ಯಾಲಯ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ

ಸಂಖ್ಯೆ: ಎಲ್.ಎನ್.ಡಿ./ಸಿಆರ್/213/08–09, ದಿನಾಂಕ:30ನೇ ಆಗಸ್ಟ್, 2010

ಸಾರ್ವಜನಿಕ ಪ್ರಕಟಣೆ

ನಮೂನೆ–27

94ನೇ ನಿಯಮದ 68(1)ನೇ ಪ್ರಕರಣದ ಮೇರೆಗಿನ ಘೋಷಣೆ

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಾರ್ವಜನಿಕ ಸರ್ಕಾರಿಬಂಡಿದಾರಿ 'ಬಿ' ಖರಾಬು ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದಿರುವುದರಿಂದ.

ಈಗ ಕರ್ನಾಟಕ ಭೂ ಕಂದಾಯ ಅಧಿನಿಯಮದ 1964ರ 68ನೇ ಪ್ರಕರಣದ (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸಾರ್ವಜನಿಕ ಸರ್ಕಾರಿ ಬಂಡಿದಾರಿ 'ಬಿ' ಖರಾಬು ಸದರಿ ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಮತ್ತು ಸಾರ್ವಜನಿಕ 'ಬಿ' ಖರಾಬು ಭಾಗದಲ್ಲಿ ಅಥವಾ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳತಕ್ಕದ್ದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

2. ಸಾರ್ವಜನಿಕರ ಉಪಯೋಗಕ್ಕಾಗಿ ಸರ್ಕಾರಿಬಂಡಿದಾರಿ 'ಬಿ' ಖರಾಬು ಸದರಿ ಭಾಗದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು, ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು (90) ದಿನದೊಳಗೆ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂಥ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂತಹ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೈಮ್ ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಜಿಲ್ಲೆಯ ಡೆಪ್ಯೂಟಿ ಕಮೀಷನರ್‌ರವರಿಗೆ ಬರಹದಲ್ಲಿ ತಿಳಿಸತಕ್ಕದ್ದು. ಮತ್ತು ಸದರಿ ಆಕ್ಷೇಪಣೆಗಳನ್ನು ಮತ್ತು ಕ್ಲೈಮ್‌ಗಳನ್ನು ಸದರಿ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಡೆಪ್ಯೂಟಿ ಕಮೀಷನರರು ಪರಿಶೀಲಿಸತಕ್ಕದ್ದು.

ಅನುಸೂಚಿ

ಭಾಗ ಇತ್ಯಾದಿ ಇರುವ ಗ್ರಾಮಗಳು	ಕುಂದಲಹಳ್ಳಿ, ಕೆ.ಆರ್.ಪುರ ಹೋಬಳಿ
ತಾಲ್ಲೂಕು	ಬೆಂಗಳೂರು ಪೂರ್ವ
ಜಿಲ್ಲೆ	ಬೆಂಗಳೂರು ನಗರ
ರಸ್ತೆಯ ಮೊದಲಾದುದರ ಭಾಗ ಅಥವಾ ಭಾಗಗಳ ವರ್ಣನೆ	ಕುಂದಲಹಳ್ಳಿ ಸ.ನಂ.10/1ರಲ್ಲಿ 0.08 ಗುಂಟೆ ಬಿ ಖರಾಬು ಬಂಡಿದಾರಿ 0.03 ಗುಂಟೆ ಹಳ್ಳ

ರಸ್ತೆಯ ಭಾಗ ಅಥವಾ ಭಾಗಗಳ ಸರಿ ಸುಮಾರು ವಿಸ್ತೀರ್ಣ	'ಬಿ' ಖರಾಬು 0.11				
ಮೇರೆ	ನಕ್ಷೆಯಂತೆ ಚೆಕ್‌ಬಂದಿ	ಉತ್ತರ ಸ.ನಂ.10/1	ದಕ್ಷಿಣ ಸ.ನಂ.10/1	ಪೂರ್ವ ಸ.ನಂ.10/2	ಪಶ್ಚಿಮ 13ರಸ.ನಂ.ಜಮೀನು
ಸಾರ್ವಜನಿಕ ರಸ್ತೆ, ಬೀದಿ, ಗಲ್ಲಿ, ದಾರಿ ಅಥವಾ ಅದರ ಭಾಗ	'ಬಿ' ಖರಾಬು 0.11 ಗುಂಟೆ ಇದ್ದು ಮೇ॥ ಸ್ಟರ್ಲಿಂಗ್ ಸೆಂಚುರಿ ಡೆವಲ್ಪರ್ಸ್ ಇವರಿಗೆ ಮಂಜೂರು ಮಾಡುವ ಬಗ್ಗೆ.				

ತಹಶೀಲ್ದಾರ್

ಪಿ.ಆರ್. 425 ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ.

ತಹಶೀಲ್ದಾರ್‌ರವರ ಕಾರ್ಯಾಲಯ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ

ಸಂಖ್ಯೆ: ಎಲ್.ಎನ್.ಡಿ/ಸಿಆರ್/271/08-09, ದಿನಾಂಕ:30ನೇ ಆಗಸ್ಟ್, 2010

ಸಾರ್ವಜನಿಕ ಪ್ರಕಟಣೆ

ನಮೂನೆ–27

94ನೇ ನಿಯಮದ 68(1)ನೇ ಪ್ರಕರಣದ ಮೇರೆಗಿನ ಘೋಷಣೆ

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಾರ್ವಜನಿಕ ಸರ್ಕಾರಿಕಾಲುವೆ 'ಬಿ' ಖರಾಬು ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದಿರುವುದರಿಂದ.

ಈಗ ಕರ್ನಾಟಕ ಭೂ ಕಂದಾಯ ಅಧಿನಿಯಮದ 1964ರ 68ನೇ ಪ್ರಕರಣದ (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸಾರ್ವಜನಿಕ ಸರ್ಕಾರಿಕಾಲುವೆ 'ಬಿ' ಖರಾಬು ಸದರಿ ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಮತ್ತು ಸಾರ್ವಜನಿಕ 'ಬಿ' ಖರಾಬು ಭಾಗದಲ್ಲಿ ಅಥವಾ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳತಕ್ಕದ್ದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

2. ಸಾರ್ವಜನಿಕರ ಉಪಯೋಗಕ್ಕಾಗಿ ಸರ್ಕಾರಿಕಾಲುವೆ 'ಬಿ' ಖರಾಬು ಸದರಿ ಭಾಗದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು, ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು (90) ದಿನದೊಳಗೆ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂಥ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂತಹ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೈಮ್ ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಜಿಲ್ಲೆಯ ಡೆಪ್ಯೂಟಿ ಕಮೀಷನರ್‌ರವರಿಗೆ ಬರಹದಲ್ಲಿ ತಿಳಿಸತಕ್ಕದ್ದು. ಮತ್ತು ಸದರಿ ಆಕ್ಷೇಪಣೆಗಳನ್ನು ಮತ್ತು ಕ್ಲೈಮ್‌ಗಳನ್ನು ಸದರಿ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಡೆಪ್ಯೂಟಿ ಕಮೀಷನರರು ಪರಿಶೀಲಿಸತಕ್ಕದ್ದು.

ಅನುಸೂಚಿ

ಭಾಗ ಇತ್ಯಾದಿ ಇರುವ ಗ್ರಾಮಗಳು	ಶೀಗೇಹಳ್ಳಿ, ಬಿದರಹಳ್ಳಿ ಹೋಬಳಿ						
ತಾಲ್ಲೂಕು	ಬೆಂಗಳೂರು ಪೂರ್ವ						
ಜಿಲ್ಲೆ	ಬೆಂಗಳೂರು ನಗರ						
ರಸ್ತೆಯ ಮೊದಲಾದುದರ ಭಾಗ ಅಥವಾ ಭಾಗಗಳ ವರ್ಣನೆ	ಶೀಗೇಹಳ್ಳಿ ಸ.ನಂ.109, 110, 111, 112, 114 ಮತ್ತು 116ರ ಜಮೀನಿನ ಮಧ್ಯ ಹಾದುಹೋಗುವ ಕಾಲುವೆ.						
ರಸ್ತೆಯ ಭಾಗ ಅಥವಾ ಭಾಗಗಳ ಸರಿ ಸುಮಾರು ವಿಸ್ತೀರ್ಣ	'ಬಿ' ಖರಾಬು 1–32						
ಮೇರೆ	ನಕ್ಷೆಯಂತೆ ಚೆಕ್‌ಬಂದಿ	ಬ್ಲಾಕ್ ನಂ.	ವಿಸ್ತೀರ್ಣ	ಉತ್ತರ	ದಕ್ಷಿಣ	ಪೂರ್ವ	ಪಶ್ಚಿಮ
		I	0.09	116	109	ಬ್ಲಾಕ್ ನಂ. II	ಚಿಕ್ಕಬನಹಳ್ಳಿ ಗಡಿ
		II	0.07	115	108	ಬ್ಲಾಕ್ ನಂ. III	ಬ್ಲಾಕ್ ನಂ. I
		III	0.22	115	109	ಬ್ಲಾಕ್ ನಂ. IV	ಬ್ಲಾಕ್ ನಂ. II
		IV	0.20	114	110	ಬ್ಲಾಕ್ ನಂ. V	ಬ್ಲಾಕ್ ನಂ. III
		V	0.14	114	111	111 & 112	ಬ್ಲಾಕ್ ನಂ. IV
ಸಾರ್ವಜನಿಕ ರಸ್ತೆ, ಬೀದಿ, ಗಲ್ಲಿ, ದಾರಿ ಅಥವಾ ಅದರ ಭಾಗ	'ಬಿ' ಖರಾಬು ಶೀಗೇಹಳ್ಳಿ ಸ.ನಂ.109,110,111,112,114 ಮತ್ತು 116ರ ಜಮೀನಿನ ಮಧ್ಯ ಹಾದುಹೋಗುವ ಕಾಲುವೆ ಪ್ರದೇಶವಾಗಿದ್ದು 1.32 ಗುಂಟೆ.						

ತಹಶೀಲ್ದಾರ್

ಪಿ.ಆರ್. 428 ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ.

ಜಿಲ್ಲಾಧಿಕಾರಿಗಳವರ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು

ಭೂ ಅರ್ಜನೆ ಅಧಿನಿಯಮ 17 ನೇ ಪ್ರಕರಣದ ಅನ್ವಯ 4(1) ನೇ ಪ್ರಕರಣದ ಮೇರೆಗೆ

ಅಧಿಸೂಚನೆ

ಕ್ರಮಾಂಕ: ಎಲ್ಎಕ್ಯೂ / ಎಸ್ಆರ್ /23/2010-11, ದಿನಾಂಕ:10-11-2010

ಇದರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಕಟ್ಟಡಗಳು/ಮನೆಗಳು ಸಾರ್ವಜನಿಕ ಉದ್ದೇಶಕ್ಕೆಅಂದರೆ ಹೇಮಾವತಿ ನಾಲಾ ವಲಯ ಯೋಜನೆಯಿಂದಾಗಿ ದ್ಯಾಮಸಂದ್ರ ಗ್ರಾಮದ ಮನೆಗಳು/ಕಟ್ಟಡಗಳು ಶೀತಪೀಡಿತವಾಗಿದ್ದು, ಇವುಗಳನ್ನು ಸ್ಥಳಾಂತರಿಸುವ ಬಗ್ಗೆ ಉನ್ನತಮಟ್ಟದ ಸಮಿತಿಯು ಅಭಿಪ್ರಾಯಪಟ್ಟಿದ್ದು, ದ್ಯಾಮಸಂದ್ರ ಗ್ರಾಮವನ್ನು ಸ್ಥಳಾಂತರಿಸುವುದು ಸಾರ್ವಜನಿಕ ಹಿತೃದಷ್ಟಿಯಿಂದ ಆಗತ್ಯವಾಗಿದೆಯೆಂದು ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರಿಗೆ ಕಂಡು ಬಂದಿರುವುದರಿಂದ ಕರ್ನಾಟಕ ಕಾಯಿದೆ 33/1991 ರ ಅನ್ವಯ ತಿದ್ದುಪಡಿಯಾದ ಕೇಂದ್ರ ಅಧಿನಿಯಮ 1894 ರ 4ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರವಾಗಿ ಆದಕ್ಕೆ ಸಂಬಂಧಪಟ್ಟ ಎಲ್ಲರಿಗೂ ಆ ಬಗ್ಗೆ ಈ ಮೂಲಕ ನೋಟೀಸುಗಳನ್ನು ಕೊಡಲಾಗಿದೆ ಹಾಗೂ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ರವರು ಅಧಿನಿಯಮದ 4(2) ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ವಿಶೇಷ ಭೂಸ್ವಾಧೀನಾಧಿಕಾರಿಗಳು, ಹೇಮಾವತಿ ನಾಲಾ ವಲಯ, ತುಮಕೂರು ಹಾಗೂ ಅವರ ಸಿಬ್ಬಂದಿ ಮತ್ತು ಕೆಲಸಗಾರರಿಗೆ ಈ ಮೂಲಕ ಅಧಿಕಾರ ನೀಡಿರುತ್ತಾರೆ.

ಕಾವೇರಿ ನೀರಾವರಿ ನಿಗಮದ ಭೂಸ್ವಾಧೀನ ಪ್ರಕರಣಗಳಲ್ಲಿ ತುರ್ತಾಗಿ ಭೂಸ್ವಾಧೀನ ಪ್ರಕ್ರಿಯೆಗಳನ್ನು ಮುಗಿಸಲು ಅನುವು ಆಗುವಂತೆ ಸದರಿ ಅಧಿನಿಯಮದ 17 ನೇ ಪ್ರಕರಣದ 4 ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಕರ್ನಾಟಕ ಸರ್ಕಾರವು ಪತ್ರ ಸಂ: ಕಂಇ 13 ಎಕ್ಯೂಡಬ್ಲ್ಯು 2004, ದಿನಾಂಕ: 17.6.2004 ರಂತೆ ಅನುಮತಿ ನೀಡಿರುತ್ತದೆ ಹಾಗೂ ತುರ್ತಾಗಿ ಈ ಭೂಮಿಯ/ ಸ್ವತ್ತುಗಳ ಅವಶ್ಯಕತೆ ಇರುವುದರಿಂದ ಸದರಿ ಅಧಿನಿಯಮದ 5(ಎ) ಪ್ರಕರಣದ ಉಪಬಂಧಗಳು ಈ ಕೆಳಗಿನ ಅನುಸೂಚಿಯಲ್ಲಿ ನಮೂದಿಸಲಾದ ಮನೆಗಳ/ಕಟ್ಟಡಗಳು ಭೂಸ್ವಾಧೀನಕ್ಕೆ ಅನ್ವಯವಾಗತಕ್ಕದ್ದಲ್ಲ ಎಂಬುದಾಗಿ ನಿರ್ದೇಶಿಸಿರುತ್ತದೆ

ಭೂ ಅರ್ಜನೆ ಉದ್ದೇಶಕ್ಕಾಗಿ ಘೋಷಿತ ಮನೆಗಳ/ಭೂಮಿಗಳ ಮೇಲೆ ನಿಯೋಜಿತರಾದ ಯಾವನೇ ಮೋಜಣಿದಾರ ಅಥವಾ ಇತರೆ ವ್ಯಕ್ತಿಗಳಿಗೆ ಅಡ್ಡಿಯನ್ನುಂಟು ಮಾಡಬಾರದೆಂದು ಪ್ರಕಟಿತ ಭೂಮಿಗಳಲ್ಲಿ ಹಿತಾಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ. ಈ ಅಧಿಸೂಚನೆಯು ಪ್ರಕಟವಾದ ದಿನಾಂಕದ ನಂತರ ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿಯವರ ಅನುಮತಿ ಇಲ್ಲದೇ ಮಾರಾಟ ಗುತ್ತಿಗೆ ಅಡಮಾನ ವಿನಿಮಯದ ಮೂಲಕ ಅಥವಾ ಬೇರೆ ರೀತಿಯ ಮೂಲಕ ಪ್ರಕಟಿತ ಭೂಮಿಗಳ ವಿಲೇಗಾಗಿ ಮಾಡಿಕೊಂಡ ಯಾವುದೇ ಕರಾರುಗಳನ್ನು ಅಥವಾ ಇದರಲ್ಲಿ ಮಾಡಲಾದ ವೆಚ್ಚ ಅಥವಾ ಅಭಿವೃದ್ಧಿಗಳನ್ನು ಅಂತಿಮವಾಗಿ ಅರ್ಜನೆ ಮಾಡಿಕೊಳ್ಳಲಾಗುವ ಭೂಮಿಗಳ ಅಂತಹ ಭಾಗಗಳಿಗೆ ಪರಿಹಾರಕ್ಕಾಗಿ ನಿರ್ಧರಣೆ ಮಾಡುವ ಅಧಿಕಾರಿಯು ಭೂ ಅರ್ಜನೆ ಅಧಿನಿಯಮದ (7ನೇ ಖಂಡದ) 2ನೇ ಪ್ರಕರಣದ ಮೇರೆಗೆ ಗಣನೆಗೆ ತೆಗೆದುಕೊಳ್ಳಬಾರದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು, ಹೇಮಾವತಿ ನಾಲಾ ವಲಯ, ತುಮಕೂರು ಇವರ ಕಛೇರಿಯಲ್ಲಿ ಭೂಮಿಗಳ ಸ್ಥೂಲ ನಕ್ಷೆಯನ್ನು ಪರಿಶೀಲನೆಗೆ ಇಡಲಾಗಿದೆ.

ಅನುಸೂಚಿ

ಜಿಲ್ಲೆ : ತುಮಕೂರು **ತಾಲ್ಲೂಕು : ತುರುವೇಕೆರೆ** **ಹೋಬಳಿ : ದಂಡಿನಶಿವರ** **ಗ್ರಾಮ : ದ್ಯಾಮಸಂದ್ರ**

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಗ್ರಾಮ ಠಾಣಾ ಖಾತೆ ನಂ.	ತರಹೆ	ಚಕ್ಕುಬಂದಿ				ಭೂಸ್ವಾಧೀನದ ಕಟ್ಟಡ/ಮನೆಯ
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ವಿಸ್ತೀರ್ಣ ಚ. ಅಡಿಗಳು
1	2	3	4	5	6	7	8	9	10
1	ಬಿ.ಮಹಾಲಿಂಗಯ್ಯ ಬಿನ್ ಬೊಮ್ಮಣ್ಣ	ಬಿ.ಮಹಾಲಿಂಗಯ್ಯ	2/2	ಮನೆ	ಮಹಲಿಂಗಪ್ಪನ ಮನೆ	ಸ್ವಂತ ಹಿಡುವಳಿ	ಸ್ವಂತ ಹಿಡುವಳಿ	ಸ್ವಂತ ಹಿಡುವಳಿ	2052
2	ಬಿ.ನಟರಾಜು ಬಿನ್ ಬಸವಲಿಂಗಪ್ಪ	ಬಿ.ನಟರಾಜು	3/3	ಮನೆ	ಗಲ್ಲಿ	ಸ್ವಂತ	ಸ್ವಂತ	ಸ್ವಂತ	1100
3	ಡಿ.ಕೆ. ವಿದ್ಯಾನಂದ ಬಿನ್ ಕಪ್ಪಣ್ಣ	ಡಿ.ಕೆ.ವಿದ್ಯಾನಂದ	4/4	ಮನೆ	ನಟರಾಜು ನಿವೇಶನ	ಬಸವರಾಜಯ್ಯನ ಮನೆ	ಬಸವರಾಜಯ್ಯನ ಮನೆ	ರಸ್ತೆ	2380

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಗ್ರಾಮ ಠಾಣಾ ಖಾತೆ ನಂ.	ತರಹೆ	ಚಕ್ಕುಬಂದಿ				ಭೂಸ್ವಾಧೀನದ ಕಟ್ಟಡ/ಮನೆಯ
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ವಿಸ್ತೀರ್ಣ ಚ. ಅಡಿಗಳು
1	2	3	4	5	6	7	8	9	10
4	ಬಸವರಾಜಯ್ಯ ಬಿನ್ ಬೋರಯ್ಯ	ಬಸವರಾಜಯ್ಯ	5/5	ಮನೆ	ವಿದ್ಯಾನಂದರ ಮನೆ	ನಂಜಮ್ಮನ ನಿವೇಶನ	ಮನೆ ಹಿಡುವಳಿ	ರಸ್ತೆ	1293
5	ಕಾತ್ಯಾಯನಮ್ಮ ಕೋಂ ಚಂದ್ರಶೇಖರಯ್ಯ (ಚಂದ್ರಶೇಖರ್ ಬಿನ್ ಸಿದ್ದೇಗೌಡ)	ಕಾತ್ಯಾಯನಮ್ಮ (ಚಂದ್ರಶೇಖರ)	6/6	ಮನೆ	ಗಲ್ಲಿ	ಗಲ್ಲಿ	ಗಲ್ಲಿ	ಗಲ್ಲಿ	1086
6	ಅಕ್ಕನಾಗಮ್ಮ ಕೋಂ ಮಹದೇವಯ್ಯ (ಮಹದೇವಯ್ಯ ಬಿನ್ ಸಿದ್ದೇಗೌಡ)	ಅಕ್ಕನಾಗಮ್ಮ (ಮಹದೇವಯ್ಯ)	7/7, 7/1	ಮನೆ	ಪಾಲಾಕ್ಷಯ್ಯನ ಮನೆ	ಸಿದ್ದಣ್ಣನವರ ಮನೆ	ಖಾತೆ ನಿವೇಶನ	ಗಲ್ಲಿ ನಂಜಮ್ಮ	1508
7	ಪಾಲಾಕ್ಷಯ್ಯ ಬಿನ್ ಸಿದ್ದೇಗೌಡ	ಪಾಲಾಕ್ಷಯ್ಯ	8/8	ಮನೆ	ರಸ್ತೆ	ಮಹದೇವಯ್ಯ	ಗಲ್ಲಿ	ಗಲ್ಲಿ	1253
8	ನಂಜಮ್ಮ ಕೋಂ ಶಿವಲಿಂಗಯ್ಯ (ಶಿವಲಿಂಗಪ್ಪ ಬಿನ್ ಸಿದ್ದೇಗೌಡ)	ನಂಜಮ್ಮ (ಶಿವಲಿಂಗಪ್ಪ)	9/9	ಮನೆ	ರಸ್ತೆ	ಸಿದ್ದಣ್ಣನ ಮನೆ	ಗಲ್ಲಿ ಪಾಲಾಕ್ಷಯ್ಯ ನವರ ಮನೆಗಲ್ಲಿ	ನಂಜೇಗೌಡ ಮನೆ	1123
9	ನಂಜೇಗೌಡ ಬಿನ್ ಮಹದೇವಯ್ಯ	ನಂಜೇಗೌಡ	10/10	ಮನೆ	ಗಲ್ಲಿ	ಗಲ್ಲಿ	ಗಲ್ಲಿ	ಗಲ್ಲಿ	504
10	ಸಿದ್ದಪ್ಪ ಬಿನ್ ಲೇ.ನಂಜೇಗೌಡ	ಸಿದ್ದಪ್ಪ	22/26 22/27	ಮನೆ	ಸೋಮ ಶೇಖರಯ್ಯ ನವರ ಮನೆ	ಸ್ವಂತ ಹಿಡುವಳಿ	ಗಂಗಣ್ಣನ ಹಿಡುವಳಿ	ಸ್ವಂತ ಹಿಡುವಳಿ	823
11	ಶಂಭುಲಿಂಗಯ್ಯ ಬಿನ್ ಲೇ. ನಂಜುಂಡಯ್ಯ	ಶಂಭುಲಿಂಗಯ್ಯ	12/14	ಮನೆ	ಗಲ್ಲಿ	ಗಲ್ಲಿ	ಗಲ್ಲಿ	ರಸ್ತೆ	462
12	ಮಹಾದೇವಮ್ಮ ಕೋಂ ಚಂದ್ರಶೇಖರಯ್ಯ	ಮಹದೇವಮ್ಮ	15/15	ಮನೆ	ಗಲ್ಲಿ	ಗಲ್ಲಿ	ಗಲ್ಲಿ	ರಸ್ತೆ	499
13	ಬಸವಲಿಂಗಯ್ಯ ಬಿನ್ ನಂಜುಂಡಯ್ಯ	ಬಸವಲಿಂಗಯ್ಯ	14/16 14/17	ಮನೆ	ಸಿದ್ದಪ್ಪನ ನಿವೇಶನ	ರಸ್ತೆ	ಗಲ್ಲಿ	ಗಲ್ಲಿ	733
14	ಬಸವಲಿಂಗಯ್ಯ ಬಿನ್ ನಂಜುಂಡಯ್ಯ	ಬಸವಲಿಂಗಯ್ಯ	14/16 14/17	ಮನೆ	ರಸ್ತೆ	ರಸ್ತೆ	ಗಲ್ಲಿ	ಗಲ್ಲಿ	526
15	ಮಹಲಿಂಗಪ್ಪ ಬಿನ್ ಸಿದ್ದನಂಜಪ್ಪ	ಮಹಲಿಂಗಪ್ಪ	21/25	ಮನೆ	ರಸ್ತೆ	ಗಲ್ಲಿ	ಗಲ್ಲಿ	ಗಲ್ಲಿ	445
16	ಪಂಚಾಕ್ಷರಿ ಬಿನ್ ಲೇ. ಸಿದ್ದನಂಜಪ್ಪ	ಪಂಚಾಕ್ಷರಿ	20/24	ಮನೆ	ರಸ್ತೆ	ಗಲ್ಲಿ	ಗಲ್ಲಿ	ಗಲ್ಲಿ	893

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಗ್ರಾಮ ಠಾಣಾ ಖಾತೆ ನಂ.	ತರಹೆ	ಚಕ್ಕುಬಂದಿ				ಭೂಸ್ವಾಧೀನದ ಕಟ್ಟಡ/ಮನೆಯ
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ವಿಸ್ತೀರ್ಣ ಚ. ಅಡಿಗಳು
1	2	3	4	5	6	7	8	9	10
17	ಮಹಾದೇವಯ್ಯ ಬಿನ್ ಬೊಮ್ಮಲಿಂಗಯ್ಯ	ಮಹದೇವಯ್ಯ	17/20	ಮನೆ	ಕಿಡಿನೇತ್ರಯ್ಯನವರ ಮನೆ	ಸದಾ ಶಿವಯ್ಯನವರ ನಿವೇಶನ	ರಸ್ತೆ	ಪಂಚಾ ಕ್ಷರಯ್ಯನ ನಿವೇಶನ	278
18	ಕಿಡಿನೇತ್ರಯ್ಯ ಬಿನ್ ನಂಜುಂಡಪ್ಪ	ಕಿಡಿನೇತ್ರಯ್ಯ	18/21	ಮನೆ	ರಸ್ತೆ	ಮಹ ದೇವಯ್ಯನವರ ಮನೆ	ರಸ್ತೆ	ಶಂಭಾಕರಯ್ಯನ ಮನೆ	986
19	ಸದಾಶಿವಯ್ಯ ಬಿನ್ ಬೊಮ್ಮಲಿಂಗಯ್ಯ	ಸದಾಶಿವಯ್ಯ	16/19	ಮನೆ	ಮಹದೇವಯ್ಯನವ ರ ನಿವೇಶನ	ಸಿದ್ದಪ್ಪ ಮತ್ತು ಮಹ ದೇವಯ್ಯನವರ ನಿವೇಶನ	ರಸ್ತೆ	ಪಂಚಾಕ್ಷ ರಯ್ಯನ ನಿವೇಶನ	563
20	ಕಿಡಿನೇತ್ರಯ್ಯ ಬಿನ್ ನಂಜುಂಡಪ್ಪ	ಕಿಡಿನೇತ್ರಯ್ಯ	18/22	ಮನೆ	ಗಲ್ಲಿ ನಂಜುಂಡಪ್ಪ	ರಸ್ತೆ	ರಸ್ತೆ	ನಂಜುಂಡಪ್ಪನವರ ನಿವೇಶನ	644
21	ಬಸವರಾಜು ಬಿನ್ ಸಿದ್ದನಂಜಪ್ಪ	ಬಸವರಾಜು	19/23	ಮನೆ	ಗಲ್ಲಿ	ರಸ್ತೆ	ಗಲ್ಲಿ	ಗಲ್ಲಿ	384
22	ರತ್ನಮ್ಮ ಕೋಂ ನಂಜುಂಡಪ್ಪ (ನಂಜುಂಡಪ್ಪ ಬಿನ್ ಸಿದ್ದನಂಜಪ್ಪ)	ರತ್ನಮ್ಮ (ನಂಜುಂಡಪ್ಪ)	15/18	ಮನೆ	ಗಲ್ಲಿ ಗಂಗಣ್ಣನ ಮನೆ	ಗಲ್ಲಿ ಕಿಡಿನೇತ್ರಯ್ಯನವ ರ ಮನೆ	ರಸ್ತೆ	ಗಂಗಣ್ಣನ ನಿವೇಶನ	480
23	ಗಂಗಣ್ಣ ಬಿನ್ ನಂಜೇಗೌಡ	ಗಂಗಣ್ಣ	11/13	ಮನೆ	ನಟರಾಜು ಮನೆ	ಗಲ್ಲಿಗಂಗಪ್ಪನ ಸ್ವಂತ ನಿವೇಶನ	ರಸ್ತೆ	ಸ್ವಂತ ಹಿಡುವಳಿ	2315
24	ನಟರಾಜು ಬಿನ್ ಬಸವಲಿಂಗಯ್ಯ	ನಟರಾಜು	3/12	ಮನೆ	ಗಲ್ಲಿ	ಗಲ್ಲಿ	ರಸ್ತೆ	ಗಲ್ಲಿ	1013
25	ಕಪ್ಪಣ್ಣಗೌಡ ಬಿನ್ ನಂಜುಂಡಪ್ಪ	ಕಪ್ಪಣ್ಣಗೌಡ	1/1	ಮನೆ	ಸ್ವಂತ ಹಿಡುವಳಿ	ಕಟ್ಟೆರಸ್ತೆ	ನಂಜುಂಡಪ್ಪನ ಹಿಡುವಳಿ	ಗಂಗಣ್ಣನ ಹಿಡುವಳಿ	621
26	ಸಿದ್ದಪ್ಪ ಬಿನ್ ಲೇ. ನಂಜೇಗೌಡ	ಸಿದ್ದಪ್ಪ	22/26 22/27	ಮನೆ	ಸೋಮಶೇಖರಯ್ಯ ನ ಹಿಡುವಳಿ	ಸ್ವಂತ ಹಿಡುವಳಿ	ಗಂಗಣ್ಣನ ಹಿಡುವಳಿ	ಸ್ವಂತ ಹಿಡುವಳಿ	964

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಗ್ರಾಮ ಠಾಣಾ ಖಾತೆ ನಂ.	ತರಹೆ	ಚಕ್ಕುಬಂದಿ				ಭೂಸ್ವಾಧೀನದ ಕಟ್ಟಡ/ಮನೆಯ
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ವಿಸ್ತೀರ್ಣ ಚ. ಅಡಿಗಳು
1	2	3	4	5	6	7	8	9	10
27	ಶಿವಣ್ಣ ಬಿನ್ ನಂಜೇಗೌಡ	ಶಿವಣ್ಣ	24/30	ಮನೆ	ಶಿವಣ್ಣನ ಮನೆ	ಸ್ವಂತ ಹಿಡುವಳಿ	ಸ್ವಂತ ಅಂಗಳ	ರಸ್ತೆ	1340
28	ಶಿವಣ್ಣ ಬಿನ್ ನಂಜೇಗೌಡ	ಶಿವಣ್ಣ	24/30,31	ಮನೆ	ಶಿವಲಿಂಗಯ್ಯನ ಹಿಡುವಳಿ	ಸೋಮಶೇಖ ರಯ್ಯನ ಮನೆ	ಚೌಕ ಅಂಗಳ	ರಸ್ತೆ	976
29	ಶಿವಲಿಂಗಯ್ಯ ಬಿನ್ ಲೇ. ನಂಜಪ್ಪ	ಶಿವಲಿಂಗಯ್ಯ	26/34	ಮನೆ	ನಂಜುಂಡಯ್ಯನ ಮನೆ	ಹಿಡುವಳಿ	ಹಿಡುವಳಿ	ಸ್ವಂತ ಹಿಡುವಳಿ	745
30	ನಂಜುಂಡಯ್ಯ ಬಿನ್ ನಂಜಪ್ಪ	ನಂಜುಂಡಯ್ಯ	25/32 25/33	ಮನೆ	ಹಿಡುವಳಿ	ಶಿವ ಲಿಂಗಯ್ಯನ ಮನೆ	ಗಂಗಣ್ಣನ ಹಿಡುವಳಿ	ಸ್ವಂತ ಹಿಡುವಳಿ	590
31	ನಂಜುಂಡಯ್ಯ ಬಿನ್ ನಂಜಪ್ಪ	ನಂಜುಂಡಯ್ಯ	25/32 25/33	ಮನೆ	ಸ್ವಂತ ಹಿಡುವಳಿ	ಹಿಡುವಳಿ	ಶಿವ ಲಿಂಗಯ್ಯನ ಮನೆ	ಸ್ವಂತ ಹಿಡುವಳಿ	413
32	ನಂದೀಶ್ ಬಿನ್ ಲೇ. ಸಿದ್ದಪ್ಪ	ನಂದೀಶ್	27/35 27/36	ಮನೆ	ಡಿ. ಎಸ್. ಗಂಗಾಧರಯ್ಯನ ಮನೆ	ಹಿಡುವಳಿ	ಹಿಡುವಳಿ	ರಸ್ತೆ	1137
33	ನಂದೀಶ್ ಬಿನ್ ಲೇ. ಸಿದ್ದಪ್ಪ	ನಂದೀಶ್	27/35 27/36	ಮನೆ	ಡಿ.ಎಸ್. ಗಂಗಾಧರಯ್ಯನ ಮನೆ	ಹಿಡುವಳಿ	ಹಿಡುವಳಿ	ರಸ್ತೆ	994
34	ಡಿ.ಗಂಗಾಧರಯ್ಯ ಬಿನ್ ಬಸವಲಿಂಗಯ್ಯ	ಡಿ.ಗಂಗಾಧರಯ್ಯ	28/37 28/38	ಮನೆ	ಬಿ. ಲೋಕೇ ಶ್ವರಯ್ಯನ ಮನೆ	ಹಿಡುವಳಿ	ಹಿಡುವಳಿ	ರಸ್ತೆ	1117
35	ಲೋಕೇಶ್ವರಯ್ಯ ಬಿನ್ ಬಸವಲಿಂಗಯ್ಯ	ಲೋಕೇಶ್ವರಯ್ಯ	29/39 29/40	ಮನೆ	ಹಿಡುವಳಿ	ಸ್ವಂತ ಮನೆ	ಹಿಡುವಳಿ	ರಸ್ತೆ	1117
36	ಗಂಗಾಧರಯ್ಯ ಬಿನ್ ಬಸವಲಿಂಗಯ್ಯ	ಗಂಗಾಧರಯ್ಯ	28/37 28/38	ಮನೆ	ಸ್ವಂತ ಮನೆ	ಹಿಡುವಳಿ	ಹಿಡುವಳಿ	ರಸ್ತೆ	398
37	ಲೋಕೇಶ್ವರಯ್ಯ ಬಿನ್ ಬಸವಲಿಂಗಯ್ಯ	ಲೋಕೇಶ್ವರಯ್ಯ	29/39 29/40	ಮನೆ	ಸ್ವಂತ ಮನೆ	ಡಿ.ಬಿ. ಗಂಗಾಧರ ಮೂರ್ತಿ	ಹಿಡುವಳಿ	ರಸ್ತೆ	602

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಗ್ರಾಮ ಠಾಣಾ ಖಾತೆ ನಂ.	ತರಹೆ	ಚಕ್ಕುಬಂದಿ				ಭೂಸ್ವಾಧೀನದ ಕಟ್ಟಡ/ಮನೆಯ
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ವಿಸ್ತೀರ್ಣ ಚ. ಅಡಿಗಳು
1	2	3	4	5	6	7	8	9	10
38	ಡಿ.ಎನ್. ಬಸವರಾಜು ಬಿನ್ ಡಿ.ಬಿ. ನಂಜುಂಡಯ್ಯ	ಡಿ.ಎನ್. ಬಸವರಾಜು	41/1	ಮನೆ	ಸ್ವಂತ ನಿವೇಶನ	ಸ್ವಂತ ಹಿಡುವಳಿ	ಸ್ವಂತ ಹಿಡುವಳಿ	ಡಿ.ಎಸ್. ಚಂದ್ರಶೇಖರಯ್ಯನ ಹಿಡುವಳಿ	2450
39	ಡಿ.ಎಸ್. ಚಂದ್ರಶೇಖರಯ್ಯ ಬಿನ್ ಸಿದ್ದನಂಜಪ್ಪ	ಡಿ.ಎಸ್.ಚಂದ್ರಶೇಖರಯ್ಯ	31/42	ಮನೆ	ಹೇಮಾವತಿ ನಾಲೆ	ಸ್ವಂತ ಹಿಡುವಳಿ	ಡಿ.ಎಸ್. ಬಸವರಾಜು ಮನೆ	ಕಿಡಿನೇತ್ರಯ್ಯನ ಹಿಡುವಳಿ	314
ಒಟ್ಟು									**37121 ಚ. ಅಡಿಗಳು**

ಜಿಲ್ಲಾಧಿಕಾರಿಗಳು,

ಪಿ.ಆರ್.429 ತುಮಕೂರು ಜಿಲ್ಲೆ, ತುಮಕೂರು.

ಜಿಲ್ಲಾಧಿಕಾರಿಗಳವರ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು

ಭೂ ಅರ್ಜನೆ ಅಧಿನಿಯಮ 17ನೇ ಪ್ರಕರಣದ ಅನ್ವಯ 4(1) ನೇ ಪ್ರಕರಣದ ಮೇರೆಗೆ ಅಧಿಸೂಚನೆ

ಕ್ರಮಾಂಕ:ಎಲ್.ಎಕ್ಯೂ/ಎಸ್‌ಆರ್/20/2010-11, ದಿನಾಂಕ:12-10-2010

ಇದರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಭೂಮಿಗಳು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಹೇಮಾವತಿ ನಾಲಾ ಉದ್ದೇಶಕ್ಕಾಗಿ ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರಿಗೆ ಕಂಡು ಬಂದಿರುವುದರಿಂದ ಕರ್ನಾಟಕ ಕಾಯಿದೆ 33:1991ರ ಅನ್ವಯ ತಿದ್ದುಪಡಿಯಾದ ಕೇಂದ್ರ ಅಧಿನಿಯಮ 1894ರ 4ನೇ ಪ್ರಕರಣದ (1)ನೇ ಉಪಪ್ರಕರಣದ ಅನುಸಾರವಾಗಿ ಅದಕ್ಕೆ ಸಂಬಂಧಪಟ್ಟ ಎಲ್ಲರಿಗೂ ಆ ಬಗ್ಗೆ ಈ ಮೂಲಕ ನೋಟಿಸುಗಳನ್ನು ಕೊಡಲಾಗಿದೆ ಹಾಗೂ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರುರವರು ಅಧಿನಿಯಮದ 4(2)ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಹೇಮಾವತಿ ನಾಲಾ ವಲಯ, ತುಮಕೂರು ಹಾಗೂ ಅವರ ಸಿಬ್ಬಂದಿ ಮತ್ತು ಕೆಲಸಗಾರರಿಗೆ ಈ ಮೂಲಕ ಅಧಿಕಾರ ನೀಡಿರುತ್ತಾರೆ.

ಕಾವೇರಿ ನೀರಾವರಿ ನಿಗಮದ ಭೂ ಸ್ವಾಧೀನ ಪ್ರಕರಣಗಳಲ್ಲಿ ತುರ್ತಾಗಿ ಭೂ ಸ್ವಾಧೀನ ಪ್ರಕ್ರಿಯೆಗಳನ್ನು ಮುಗಿಸಲು ಅನುವು ಆಗುವಂತೆ ಸದರಿ ಅಧಿನಿಯಮದ 17ನೇ ಪ್ರಕರಣದ (4)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಕರ್ನಾಟಕ ಸರ್ಕಾರವು ಪತ್ರ ನಂಬರ್ ಕಂ.ಇ13 ಎಕ್ಯೂಡಬ್ಲ್ಯೂ 2004 ದಿನಾಂಕ:17.06.2004 ರಂತೆ ಅನುಮತಿ ನೀಡಿರುತ್ತದೆ ಹಾಗೂ ತುರ್ತಾಗಿ ಭೂಮಿಯ ಅವಶ್ಯಕತೆ ಇರುವುದರಿಂದ ಸದರಿ ಅಧಿನಿಯಮದ 5-ಎ ಪ್ರಕರಣದ ಉಪ ಬಂಧಗಳು ಈ ಕೆಳಗಿನ ಅನುಸೂಚಿಯಲ್ಲಿ ನಮೂದಿಸಲಾದ ಭೂಮಿಗಳ ಭೂ ಸ್ವಾಧೀನಕ್ಕೆ ಅನ್ವಯವಾಗತಕ್ಕದ್ದಲ್ಲ ಎಂಬುದಾಗಿ ನಿರ್ದೇಶಿಸಿರುತ್ತದೆ.

ಭೂ ಅರ್ಜನೆ ಉದ್ದೇಶಕ್ಕಾಗಿ ಘೋಷಿತ ಭೂಮಿಗಳ ಮೇಲೆ ನಿಯೋಜಿತರಾದ ಯಾವನೇ ಮೋಜಣಿದಾರ ಅಥವಾ ಇತರೆ ವ್ಯಕ್ತಿಗಳಿಗೆ ಅಡ್ಡಿಯನ್ನುಂಟು ಮಾಡಬಾರದೆಂದು ಪ್ರಕಟಿತ ಭೂಮಿಗಳಲ್ಲಿ ಹಿತಾಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ. ಈ ಅಧಿಸೂಚನೆಯು ಪ್ರಕಟವಾದ ದಿನಾಂಕದ ನಂತರ ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿಯವರ ಅನುಮತಿ ಇಲ್ಲದೆ, ಮಾರಾಟ, ಗುತ್ತಿಗೆ, ಅಡಮಾನ ವಿನಿಮಯದ ಮೂಲಕ ಅಥವಾ ಬೇರೆ ರೀತಿಯ ಮೂಲಕ ಪ್ರಕಟಿತ ಭೂಮಿಗಳ ವಿಲೇಗಾಗಿ ಮಾಡಿಕೊಂಡ ಯಾವುದೇ ಕರಾರುಗಳನ್ನು ಅಥವಾ ಇದರಲ್ಲಿ ಮಾಡಲಾದ ವೆಚ್ಚ ಅಥವಾ ಅಭಿವೃದ್ದಿಗಳನ್ನು ಅಂತಿಮವಾಗಿ ಅರ್ಜನೆ ಮಾಡಿಕೊಳ್ಳಲಾಗುವ ಭೂಮಿಗಳ ಅಂತಹ ಭಾಗಗಳಿಗೆ ಪರಿಹಾರಕ್ಕಾಗಿ ನಿರ್ಧರಣೆ ಮಾಡುವ ಅಧಿಕಾರಿಯು ಭೂ ಅರ್ಜನೆ ಅಧಿನಿಯಮದ (7ನೇ ಖಂಡದ) 2ನೇ ಪಕರಣದ ಮೇರೆಗೆ ಗಣನೆಗೆ ತೆಗೆದುಕೊಳ್ಳಬಾರದು.

ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಹೇಮಾವತಿ ನಾಲಾವಲಯ, ತುಮಕೂರು ಇವರ ಕಛೇರಿಯಲ್ಲಿ ಭೂಮಿಗಳ ಸ್ಥೂಲ ನಕ್ಷೆಯನ್ನು ಪರಿಶೀಲನೆಗೆ ಇಡಲಾಗಿದೆ.

ಅನುಸೂಚಿ

ಜಿಲ್ಲೆ : ತುಮಕೂರು ತಾಲ್ಲೂಕು: ಕುಣಿಗಲ್ ಹೋಬಳಿ : ಕಸಬಾ ಗ್ರಾಮ :ಬಿದನಗೆರೆ

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸ.ನಂ.	ತರಹೆ	ಚಕ್ಕುಬಂದಿ				ಭೂಸ್ವಾಧೀನದ ಜಮೀನಿನ	
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ವಿಸ್ತೀರ್ಣ ಎ-ಗುಂ	ಆಕಾರ ರೂ.ಪೈ
1	2	3	4	5	6	7	8	9	10	11
1	ತಿಮ್ಮಯ್ಯ ಬಿನ್ ವೆಂಕಟಪ್ಪ, ಯಾಲಕ್ಕಯ್ಯ ಬಿನ್ ವೆಂಕಟಯ್ಯ, ಚಿಕ್ಕತೋಪಯ್ಯ ಬಿನ್ ತೋಪಯ್ಯ, ಬಿ.ಟಿ. ರಂಗಪ್ಪ ಬಿನ್ ತೋಪಯ್ಯ, ಅಚ್ಚುತ ಬಿನ್ ಲೇ. ಗಂಗರಂಗಣ್ಣ, ಶಂಕರಪ್ಪ ಬಿನ್ ಲೇ. ಗಂಗರಂಗಣ್ಣ, ರಂಗಸ್ವಾಮಿ ಬಿನ್ ಲೇ. ವೆಂಕಟಪ್ಪ, ದೊಡ್ಡತೋಪೇಗೌಡ ಬಿನ್ ಲೇ. ವೆಂಕಟಪ್ಪ, ಚನ್ನತಿಮ್ಮಯ್ಯ ಬಿನ್ ಲೇ. ವೆಂಕಟಪ್ಪ, ರಂಗಮ್ಮ ಬಿನ್ ಲೇ. ವೆಂಕಟಪ್ಪ, ವೆಂಕಟಪ್ಪ ಉ. ಶಿವಣ್ಣ, ಚನ್ನತಿಮ್ಮಯ್ಯ ಉ. ಹೆಳವಯ್ಯ, ಮಾಯಮ್ಮ ಕೋಂ ಲೇ. ರಂಗಸ್ವಾಮಯ್ಯ, ಬಿ.ಟಿ. ಶಿವಣ್ಣ ಬಿನ್ ಲೇ. ತಿಮ್ಮಯ್ಯ, ಬಿ.ಟಿ. ಶಿವಣ್ಣ ಬಿನ್ ಲೇ. ತಿಮ್ಮಯ್ಯ	ಚಿಕ್ಕತೋಪಯ್ಯ, ಚಿಕ್ಕತೋಪಯ್ಯ, ಬಿ.ಟಿ. ರಂಗಪ್ಪ, ಅಚ್ಚುತ, ಶಂಕರಪ್ಪ, ರಂಗಸ್ವಾಮಿ, ದೊಡ್ಡತೋಪಯ್ಯ, ಚನ್ನತಿಮ್ಮಯ್ಯ, ಚನ್ನತಿಮ್ಮಯ್ಯ, ರಂಗಮ್ಮ, ಬಿ.ಟಿ. ಶಿವಣ್ಣ, ಚಿಕ್ಕತೋಪಯ್ಯ, ಯಾಲಕ್ಕಯ್ಯ, ಮಾಯಮ್ಮ	76/2ಎ	ಖುಷ್ಕಿ	76/2ಸಿ	74/4	75/6	80/2	5-09	5-97
2	ಬಿ.ಎಲ್. ಮಂಚಯ್ಯ ಬಿನ್ ಲಿಂಗಯ್ಯ	ಬಿ.ಎಲ್. ಮಂಚಯ್ಯ	85/1ಬಿ	ಖುಷ್ಕಿ	85/2	85/1ಎ	85/5	ಉಳಿಕೆ	0-14	0-49
3	ಬಿ.ಆರ್. ರಂಗಯ್ಯ ಬಿನ್ ರಂಗಪ್ಪ	ಬಿ.ಆರ್. ರಂಗಯ್ಯ	85/7	ಖುಷ್ಕಿ	ಉಳಿಕೆ	75/11	85/8ಬಿ	85/5	1-08	1-68
4	ಚಿಕ್ಕತೋಪಯ್ಯ ಬಿನ್ ತೋಪಯ್ಯ, ರಂಗಪ್ಪ ಬಿನ್ ತೋಪಯ್ಯ	ರಂಗಪ್ಪ, ಚಿಕ್ಕತೋಪಯ್ಯ	91/2	ಖುಷ್ಕಿ	ಉಳಿಕೆ	ಉಳಿಕೆ	91/1	93/2	0-06	0-24

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸ.ನಂ.	ತರಹೆ	ಚಕ್ಕುಬಂದಿ				ಭೂಸ್ವಾಧೀನದ ಜಮೀನಿನ	
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ವಿಸ್ತೀರ್ಣ ಎ-ಗುಂ	ಆಕಾರ ರೂ.ಪೈ
1	2	3	4	5	6	7	8	9	10	11
5	ರಾಮಣ್ಣಗೌಡ, ಕರಿಯಣ್ಣಗೌಡ, ಯಾಲಕ್ಕಯ್ಯ ಬಿನ್ ವೆಂಕಟಪ್ಪ, ಟಿ. ರಂಗಣ್ಣ ಬಿನ್ ಲೇ. ತೋಪಯ್ಯ, ಬಿ.ಟಿ. ಚನ್ನತಿಮ್ಮಯ್ಯ ಬಿನ್ ಲೇ. ತೋಪಯ್ಯ, ಬಿ.ಟಿ. ಗಂಗಯ್ಯ ಬಿನ್ ಲೇ. ತಿಮ್ಮಯ್ಯ, ರಂಗಪ್ಪ ಬಿನ್ ಲೇ. ಗಂಗರಂಗಣ್ಣ, ಅಚ್ಚುತ ಬಿನ್ ಲೇ. ಗಂಗರಂಗಣ್ಣ, ದೊಡ್ಡತೋಪೇಗೌಡ ಬಿನ್. ಲೇ. ವೆಂಕಟಪ್ಪ, ವೆಂಕಟಪ್ಪ ಉ.ಶಿವಣ್ಣ ಬಿನ್ ಲೇ. ಚನ್ನತಿಮ್ಮಯ್ಯ ಉ.ಹೆಳವಯ್ಯ, ತೋಪಯ್ಯ, ದೊಡ್ಡತೋಪಯ್ಯ, ಚನ್ನತಿಮ್ಮಯ್ಯ, ಶಾರದಮ್ಮ ಕೋಂ ಲೇ. ಬಿ.ಟಿ. ನಾಗರಾಜು, ಸುಪ್ರಿಯಾ ಬಿನ್ ಲೇ. ಬಿ.ಟಿ. ನಾಗರಾಜು, ಮೈ.ಗಾ. ತಾಯಿ ಶಾರದಮ್ಮ, ಬಿ.ಸಿ. ರಂಗಯ್ಯ ಬಿನ್ ಲೇ. ಚನ್ನತಿಮ್ಮಯ್ಯ.	ರಾಮಣ್ಣಗೌಡ, ಕರಿಯಣ್ಣಗೌಡ, ಯಾಲಕ್ಕಯ್ಯ, ಟಿ. ರಂಗಣ್ಣ, ಬಿ.ಟಿ. ಚನ್ನತಿಮ್ಮಯ್ಯ, ಬಿ.ಟಿ.ಗಂಗಯ್ಯ. ರಂಗಪ್ಪ, ಅಚ್ಚುತ, ದೊಡ್ಡತೋಪೇಗೌಡ, ವೆಂಕಟಪ್ಪ ಉ. ಶಿವಮ್ಮ, ತೋಪಯ್ಯ, ದೊಡ್ಡತೋಪಯ್ಯ, ಚನ್ನತಿಮ್ಮಯ್ಯ, ಶಾರದಮ್ಮ, ಸುಪ್ರಿಯಾ, ಬಿ.ಸಿ .ರಂಗಯ್ಯ	91/1	ಖುಷ್ಕಿ	90	ಉಳಿಕೆ	ರಾ.ಹೆ.	91/2	1-27	2-68
6	ಬಿ.ಟಿ. ಗಂಗಯ್ಯ ಬಿನ್ ಲೇ.ತಿಮ್ಮಯ್ಯ, ರಂಗಣ್ಣ ಬಿನ್ ಲೇ. ಕಾಳಯ್ಯ	ತಿರುಮಲೇಗೌಡ ಉ. ಮೂಸಯ್ಯ, ಬಿ.ಟಿ. ಗಂಗಯ್ಯ, ರಂಗಣ್ಣ	92/1ಎ	ಖುಷ್ಕಿ	ಉಳಿಕೆ	93/2	92/2	93/1ಬಿ	0-14	0-49
7	ಗಂಗಯ್ಯ, ಟಿ. ರಂಗಣ್ಣ ಬಿನ್ ಲೇ. ತೋಪಯ್ಯ	ಗಂಗಯ್ಯ, ಟಿ.ರಂಗಣ್ಣ	93/2	ಖುಷ್ಕಿ	92/2	93/1ಎ	80/8ಬಿ	1	3-21	4-94
8	ತೋಪೇಗೌಡ ಬಿನ್ ತಿರುಮಲೇಗೌಡ, ಬಿ.ಆರ್. ಜಯರಾಮ್ ಬಿನ್ ಲೇ. ರಂಗಪ್ಪ	ತೋಪೇಗೌಡ, ಬಿ.ಆರ್. ಜಯರಾಮ್	99	ಖುಷ್ಕಿ ತರಿ	100	ಉಳಿಕೆ	98	ರಾ.ಹೆ.	1-05 0-26	1-80 1-25
9	ದೊಡ್ಡತೋಪೇಗೌಡ ಬಿನ್ ಚಿಕ್ಕತಿಮ್ಮೇಗೌಡ, ಚಿಕ್ಕ ತೋಪಯ್ಯ ಬಿನ್ ತೋಪಯ್ಯ, ಬಿ.ಟಿ. ರಂಗಪ್ಪ ಬಿನ್ ತೋಪಯ್ಯ, ವೆಂಕಟಪ್ಪ ಉ.ಶಿವಣ್ಣ ಬಿನ್ ಲೇ. ಚನ್ನತಿಮ್ಮಯ್ಯ ಉ. ಹೆಳವಯ್ಯ	ದೊಡ್ಡತೋಪೇಗೌಡ, ಚಿಕ್ಕತೋಪಯ್ಯ, ಬಿ.ಟಿ. ರಂಗಪ್ಪ, ವೆಂಕಟಪ್ಪ ಉ. ಶಿವಣ್ಣ	100/1	ತರಿ	ಉಳಿಕೆ	99	98	100/2	0-09	0-41

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸ.ನಂ.	ತರಹೆ	ಚಕ್ಕುಬಂದಿ				ಭೂಸ್ವಾಧೀನದ ಜಮೀನಿನ	
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ವಿಸ್ತೀರ್ಣ ಎ-ಗುಂ	ಆಕಾರ ರೂ.ಪೈ
1	2	3	4	5	6	7	8	9	10	11
10	ರಾಮಣ್ಣ ಬಿನ್ ಲೇ. ತಿರುಮಲಯ್ಯ,	ರಾಮಣ್ಣ	100/2	ತರಿ	ಉಳಿಕೆ	99	100/1	ರಾ.ಹೆ.	0-01	0-04
11	ಗಂಗಯ್ಯ ಬಿನ್ ಚನ್ನತಿಮ್ಮಯ್ಯ ಉ. ಕರಿಯಪ್ಪ, ಕಾಳಯ್ಯ ಬಿನ್ ಚಿಕ್ಕತಿಮ್ಮಯ್ಯ, ಉ. ಮಂಡಪ್ಪ, ಟಿ.ರಂಗಣ್ಣ ಬಿನ್ ಲೇ. ತೋಪಯ್ಯ, ಬಿ.ಟಿ. ಚನ್ನತಿಮ್ಮಯ್ಯ ಬಿನ್ ತೋಪಯ್ಯ, ಶಾರದಮ್ಮ ಕೋಂ ಲೇ. ಬಿ.ಟಿ. ನಾಗರಾಜು, ಸುಪ್ರಿಯಾ ಬಿನ್ ಲೇ. ಬಿ.ಟಿ. ನಾಗರಾಜು, ಮೈ.ಗಾ. ತಾಯಿ ಶಾರದಮ್ಮ	ಗಂಗಯ್ಯ, ಕಾಳಯ್ಯ, ಶಾರದಮ್ಮ, ಸುಪ್ರಿಯಾ, ಟಿ. ರಂಗಣ್ಣ, ಬಿ.ಟಿ.ಚನ್ನತಿಮ್ಮಯ್ಯ	105/1	ತರಿ	ಉಳಿಕೆ	98	105/2	100	0-06	0-27
12	ಗಂಗಯ್ಯ ಬಿನ್ ಚನ್ನತಿಮ್ಮಯ್ಯ, ಲಕ್ಷ್ಮಮ್ಮ ಕೋಂ ಲೇ. ತೋಪಯ್ಯ,ಕೃಷ್ಣಪ್ಪ ಬಿನ್ ತೋಪಯ್ಯ, ರಂಗಸ್ವಾಮಿ ಬಿನ್ ತೋಪಯ್ಯ, ಬಿ.ಟಿ .ಗಂಗಯ್ಯ ಬಿನ್ ಲೇ. ತಿಮ್ಮಯ್ಯ, ರಂಗಣ್ಣ ಬಿನ್ ಲೇ. ಕಾಳಯ್ಯ, ರಾಮಣ್ಣ	ಗಂಗಯ್ಯ, ರಾಮಣ್ಣ, ಲಕ್ಷ್ಮಮ್ಮ, ಕೃಷ್ಣಪ್ಪ, ರಂಗಸ್ವಾಮಿ, ಬಿ.ಟಿ. ಗಂಗಯ್ಯ, ರಂಗಣ್ಣ	105/2	ತರಿ	ಉಳಿಕೆ	98	105/3	105/1	0-19	0-86
13	ತೋಪೇಗೌಡ ಬಿನ್ ತಿರುಮಲೇಗೌಡ, ಬಿ.ಆರ್. ಜಯರಾಮ್ ಬಿನ್ ಲೇ.ರಂಗಪ್ಪ	ತೋಪೇಗೌಡ, ಬಿ.ಆರ್. ಜಯರಾಮ್	105/3	ತರಿ	ಉಳಿಕೆ	105/2	106/2	105/2	0-11	0-50
14	ಕಾಳಯ್ಯ ಬಿನ್ ಚನ್ನತಿಮ್ಮಯ್ಯ ಉ. ಮಂಡಯ್ಯ, ಬಿ.ಟಿ. ರಂಗಣ್ಣ ಬಿನ್ ಲೇ. ತೋಪಯ್ಯ, ಬಿ.ಟಿ. ಚನ್ನತಿಮ್ಮಯ್ಯ ಬಿನ್ ಲೇ. ತೋಪಯ್ಯ, ಅಕ್ಕಮಾರಮ್ಮ ಕೋಂ ಲೇ.ಗಂಗಯ್ಯ, ಶಾರದಮ್ಮ ಕೋಂ ಬಿ.ಟಿ.ನಾಗರಾಜು, ಮೈ.ಗಾ. ತಾಯಿ ಶಾರದಮ್ಮ, ಸುಪ್ರಿಯಾ ಬಿನ್ ಲೇ. ಬಿ.ಟಿ. ನಾಗರಾಜು, ಮೈ.ಗಾ.ತಾಯಿ ಶಾರದಮ್ಮ	ಕಾಳಯ್ಯ, ಬಿ.ಟಿ. ರಂಗಣ್ಣ, ಬಿ.ಟಿ. ಚನ್ನತಿಮ್ಮಯ್ಯ, ಶಾರದಮ್ಮ, ಸುಪ್ರಿಯಾ, ಅಕ್ಕಮಾರಮ್ಮ	97/1	ಖುಷ್ಕಿ ತರಿ	106/2	ಉಳಿಕೆ	ಉಳಿಕೆ	105/2	0-02 0-12	0-08 0-72

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸ.ನಂ.	ತರಹೆ	ಚಕ್ಕುಬಂದಿ				ಭೂಸ್ವಾಧೀನದ ಜಮೀನಿನ	
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ವಿಸ್ತೀರ್ಣ ಎ-ಗುಂ	ಆಕಾರ ರೂ.ಪೈ
1	2	3	4	5	6	7	8	9	10	11
15	ಶ್ರೀರಂಗನಾಥಸ್ವಾಮಿ ದೇವರು, ಅರ್ಚಕ ಸಂಪತ್ತಯ್ಯ ಬಿನ್ ಬಿಳಿಗಿರಯ್ಯ, ಸಾರ್ವಜನಿಕ ಸ್ಮಶಾನ	ಅರ್ಚಕ ಸಂಪತ್ತಯ್ಯ	109	ಖುಷ್ಕಿ	ಗಡಿ	ಉಳಿಕೆ	ಉಳಿಕೆ	107/2,4	2-08	3-52
ಒಟ್ಟು				**ಖುಷ್ಕಿ** **ತರಿ**					**15-34** **2-04**	**21-91** **4-05**

ಘೋಷ್ವಾರೆ

ಕ್ರ.ಸಂ	ಗ್ರಾಮದ ಹೆಸರು	ಖುಷ್ಕಿ	ತರಿ	ಒಟ್ಟು
1	ಬಿದನಗೆರೆ	15-34	2-04	17-38
ಒಟ್ಟು		**15-34**	**2-04**	**17-38**

ಜಿಲ್ಲಾಧಿಕಾರಿಗಳು,
ತುಮಕೂರು ಜಿಲ್ಲೆ, ತುಮಕೂರು.

ಪಿ.ಆರ್.407

ಕಂದಾಯ ಇಲಾಖೆ

ಭೂಸ್ವಾಧೀನ ಕಾಯ್ದೆ ಕಲಂ 17(1)ರ ಅನ್ವಯ ಕಲಂ 6(1)ರ ಅಂತಿಮ ಘೋಷಣೆ

ಕ್ರಮಾಂಕ: ಕಂಇ ಭೂಸ್ವಾ ICR :67/2010–11, ದಿನಾಂಕ:19ನೇ ಅಕ್ಟೋಬರ್, 2010

ಈ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿರುವ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ತುಂಗಾ ಮೇಲ್ದಂಡೆ ಯೋಜನೆ ಮೈನರ್ ಕಾಲುವೆ ನಿರ್ಮಾಣದ ಸಲುವಾಗಿ ಅವಶ್ಯ ಬೇಕಾಗಿರುವುದರಿಂದ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಪತ್ರದ ನಂ. ಎಲ್ಎಕ್ಯೂಸಿಆರ್ 18/08–09, ದಿನಾಂಕ:10.11.2008ರ ಅಧಿಸೂಚನೆಯಲ್ಲಿ ತಿಳಿಯಪಡಿಸಲಾಗಿದೆ ಹಾಗೂ ದಿನಾಂಕ:20.11.2008ರಂದು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಸದರಿ ಅಧಿನಿಯಮದ 17ನೇ ಪ್ರಕರಣದ (1) ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರಕಾರವು ಸದರಿ ಅಧಿನಿಯಮದ 9ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಸೂಚಿಸಿರುವ ನೋಟೀಸಿನ ಪ್ರಕರಣದಲ್ಲಿ ಸೂಚಿಸಿರುವ ನೋಟೀಸಿನ ಪ್ರಕಟಣೆಯ ದಿನಾಂಕದಿಂದ 15 ದಿವಸಗಳ ಮುಕ್ತಾಯದ ನಂತರ ಸದರಿ ಭೂಮಿಗಳನ್ನು ಸ್ವಾಧೀನಕ್ಕೆ ತೆಗೆದು ಕೊಳ್ಳಬಹುದೆಂದು ನಿರ್ದೇಶಿಸಿರುತ್ತಾರೆ.

ಸದರಿ ಭೂ ಸ್ವಾಧೀನ ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಸದರಿ ಜಮೀನುಗಳು ಮೇಲಿನ ಉದ್ದೇಶಕ್ಕಾಗಿ ಅಗತ್ಯವಾಗಿ ಬೇಕಾಗಿರುವುದೆಂದು ಈ ಮೂಲಕ ಘೋಷಿಸಲಾಗಿದೆ. ಸದರಿ ಭೂ ಸ್ವಾಧೀನ ಅಧಿನಿಯಮದ ಪ್ರಕಾರ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರನ್ನು ಸದರಿ ಜಮೀನುಗಳ ಸಂಬಂಧದಲ್ಲಿ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳವರ ಪ್ರಶಾಸನ ಕಾರ್ಯವನ್ನು ನಿರ್ವಹಿಸುವಂತೆ ಈ ಮೂಲಕ ನೇಮಿಸಲಾಗಿದೆ. ಮತ್ತು ಜಮೀನಿನ ಅಧಿಕೃತ ಸ್ವಾಧೀನ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ನಿರ್ದೇಶಿಸಲಾಗಿದೆ ಸದರಿ ಭೂಮಿಗಳಲ್ಲಿ ನಕಾಶೆಯನ್ನು ಪರಿವೀಕ್ಷಣೆಗಾಗಿ ವಿಶೇಷ ಭೂ ಸ್ವಾಧೀನಾಧಿಕಾರಿ, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರ ಕಛೇರಿಯಲ್ಲಿ ಇಡಲಾಗಿದೆ.

ಅನುಸೂಚಿ

ಜಿಲ್ಲೆಃ ದಾವಣಗೆರೆ ತಾಲ್ಲೂಕುಃ ಹೊನ್ನಾಳಿ ಹೋಬಳಿ ಃ ಗೋವಿನಕೋವಿ ಗ್ರಾಮಃ ಗಂಗನಕೋಟೆ.

ಕ್ರ. ಸಂ.	ಖಾತೆದಾರರ ಹೆಸರು	ಋಣಭಾರ ಹಕ್ಕುಗಳು	ಅನುಭವ ದಾರರ ಹೆಸರು	ಸ.ನಂ	ತರಹೆ	ಚಕ್ಕುಬಂದಿ				ಭೂ ಸ್ವಾಧೀನ ಜಮೀನಿನ ವಿವರ		ಮನೆ ಮರ ಬಾವಿ ಇತ್ಯಾದಿ		
						ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ	ವಿಸ್ತೀರ್ಣ ಎ.ಗುಂ.	ಆಕಾರ	ಮರ	ಬಾವಿ	ಮನೆ
						ಸ.ನಂ.	ಸ.ನಂ.	ಸ.ನಂ.	ಸ.ನಂ.		ರೂ. ಪೈ.			
1	2	3	4	5	6	7	8	9	10	11	12	13	14	15
1	1.ಚನ್ನಬಸಪ್ಪ 2.ಮಲ್ಲೇಶಪ್ಪ ಜಂಟಿ 3.ಮಹೇಶ್ವರಪ್ಪ	-	ಸ್ವಂತ	48/2ಪಿ2 (48/2)	ಖುಷ್ಕಿ	50	47,56	ಹಳ್ಳ	39	0-24	0-68	9 ಹುಣಸೆ ಮರ		
2	1.ನಾರಪ್ಪಗೌಡ ಬಿನ್ ಮುನಿಯಪ್ಪ 2.ಮುನೇಶ್ವರಪ್ಪ ಬಿನ್ ಜಿ.ಬಸಪ್ಪ	ವಿಎಸ್ ಎಸ್ ಎನ್ ಎಂಆರ್ 3/97-98	ಸ್ವಂತ	48/3ಪಿ1 48/3ಪಿ2 (48/3)	ಖುಷ್ಕಿ	50	47,56	ಹಳ್ಳ	39	0-18	0-51	4 ತೆಂಗಿನ ಮರ		
3	ಎಂ.ಪಿ.ಜಿ.ಮಲ್ಲೇಶಪ್ಪ ಬಿನ್ ಪರ್ವತಪ್ಪ	-	ಸ್ವಂತ	56/1	ಖುಷ್ಕಿ	48	ಗಡಿ	47	ರಸ್ತೆ	0-07	0-19			-
4	1. ಬಸಪ್ಪ ಬಿನ್ ಚನ್ನಬಸಪ್ಪ 2.ಶೇಖರಪ್ಪ ಬಿನ್ ಚನ್ನಬಸಪ್ಪ	ವಿಎಸ್ ಎಸ್ ಎನ್ ಕುಂಕುವ ಎಂಆರ್ 8/99-2000	ಸ್ವಂತ	56/2ಪಿ1 56/2ಪಿ2 (56/2)	ಖುಷ್ಕಿ	48	ಗಡಿ	47	ರಸ್ತೆ	0-09	0-24	1 ತೆಂಗಿನ ಮರ 20 ಅಡಿಕೆ ಗಿಡ (ಸಣ್ಣದು)		
5	ಎಂ.ಪಿ.ಜಿ.ಚನ್ನಬಸಪ್ಪ ಬಿನ್ ಪರ್ವತಪ್ಪ	-	ಸ್ವಂತ	56/3	ಖುಷ್ಕಿ	48	ಗಡಿ	47	ರಸ್ತೆ	0-03	0-08			
6	ಬಸಪ್ಪ ಬಿನ್ ಚನ್ನಬಸಪ್ಪ	-	ಸ್ವಂತ	56/4	ಖುಷ್ಕಿ	48	ಗಡಿ	47	ರಸ್ತೆ	0-02¼	0-06			
									ಒಟ್ಟು	**1-23¼**				

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಎಂ. ಶಿರೋಳ, ಐ.ಎ.ಎಸ್.

ಆಯುಕ್ತರು,

ಪುನರವಸತಿ ಹಾಗೂ ಭೂಸ್ವಾಧೀನ ಕೃ.ಮೇ.ಯೋ. ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ,

ಕಂದಾಯ ಇಲಾಖೆ, ಬಾಗಲಕೋಟೆ.

ಪಿ.ಆರ್.435

ಕಂದಾಯ ಇಲಾಖೆ

ಭೂಸ್ವಾಧೀನ ಕಾಯ್ದೆ ಕಲಂ 17(1)ರ ಅನ್ವಯ ಕಲಂ 6(1)ರ ಅಂತಿಮ ಘೋಷಣೆ

ಕ್ರಮಾಂಕ: ಕಂಇ ಭೂಸ್ವಾ ICR :58/2010–11, ದಿನಾಂಕ:23ನೇ ಸೆಪ್ಟೆಂಬರ್, 2010

ಈ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿರುವ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆತುಂಗಾ ಮೇಲ್ದಂಡೆ ಯೋಜನೆ, ಎಸ್ಕೇಪ್ ಕಾಲುವೆ ನಿರ್ಮಾಣದ ಸಲುವಾಗಿ ಅವಶ್ಯ ಬೇಕಾಗಿರುವುದರಿಂದ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಪತ್ರದ ಎಲ್ಎಕ್ಯೂ ಸಿಆರ್49/08-09 ದಿನಾಂಕ:6-1-2009 ರ ಅಧಿಸೂಚಿಯಲ್ಲಿ ತಿಳಿಯಪಡಿಸಲಾಗಿದೆ ಹಾಗೂ ದಿನಾಂಕ:12-2-09 ರಂದು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

ಸದರಿ ಅಧಿನಿಯಮದ 17ನೇ ಪ್ರಕರಣದ (1) ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರಕಾರವು ಸದರಿ ಅಧಿನಿಯಮದ 9ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಸೂಚಿಸಿರುವ ನೋಟೀಸಿನ ಪ್ರಕರಣದಲ್ಲಿ ಸೂಚಿಸಿರುವ ನೋಟೀಸಿನ ಪ್ರಕಟಣೆಯ ದಿನಾಂಕದಿಂದ 15 ದಿವಸಗಳ ಮುಕ್ತಾಯದ ನಂತರ ಸದರಿ ಭೂಮಿಗಳನ್ನು ಸ್ವಾಧೀನಕ್ಕೆ ತೆಗೆದು ಕೊಳ್ಳಬಹುದೆಂದು ನಿರ್ದೇಶಿಸಿರುತ್ತಾರೆ.

ಸದರಿ ಭೂ ಸ್ವಾಧೀನ ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಸದರಿ ಜಮೀನುಗಳು ಮೇಲಿನ ಉದ್ದೇಶಕ್ಕಾಗಿ ಅಗತ್ಯವಾಗಿ ಬೇಕಾಗಿರುವುದೆಂದು ಈ ಮೂಲಕ ಘೋಷಿಸಲಾಗಿದೆ. ಸದರಿ ಭೂ ಸ್ವಾಧೀನ ಅಧಿನಿಯಮದ ಪ್ರಕಾರ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರನ್ನು ಸದರಿ ಜಮೀನುಗಳ ಸಂಬಂಧದಲ್ಲಿ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳವರ ಪ್ರಶಾಸನ ಕಾರ್ಯವನ್ನು ನಿರ್ವಹಿಸುವಂತೆ ಈ ಮೂಲಕ ನೇಮಿಸಲಾಗಿದೆ. ಮತ್ತು ಜಮೀನಿನ ಅಧಿಕೃತ ಸ್ವಾಧೀನ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ನಿರ್ದೇಶಿಸಲಾಗಿದೆ ಸದರಿ ಭೂಮಿಗಳಲ್ಲಿ ನಕಾಶೆಯನ್ನು ಪರಿವೀಕ್ಷಣೆಗಾಗಿ ವಿಶೇಷ ಭೂ ಸ್ವಾಧೀನಾಧಿಕಾರಿ, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರ ಕಛೇರಿಯಲ್ಲಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ:ದಾವಣಗೆರೆ **ತಾಲ್ಲೂಕು:ಹೊನ್ನಾಳ್ಳಿ** **ಹೋಬಳಿ: ಕಸಬಾ** **ಗ್ರಾಮ: ಹತ್ತೂರು**

ಕ್ರ. ಸಂ.	ಖಾತೆದಾರರ ಹೆಸರು	ಋಣಭಾರ ಹಕ್ಕು ಗಳು	ಅನುಭವದಾರರ ಹೆಸರು	ಸ.ನಂ	ತರಹೆ	ಚಕ್ಕುಬಂದಿ				ಭೂಸ್ವಾಧೀನ ಜಮೀನಿನ ವಿವರ		ಮನೆ,ಮರ,ಬಾವಿ ಇತ್ಯಾದಿ		
						ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ವಿಸ್ತೀರ್ಣ ಸ.ನಂ	ಆಕಾರ ರೂ.ಪೈ	ಮರ	ಬಾವಿ	ಮನೆ
1	ಪರಮೇಶ್ವರಪ್ಪ ಬಿನ್ ಮಹಾದೇವಪ್ಪ ಷಣ್ಮುಖಪ್ಪ ಬಿನ್ ತಿಮ್ಮಪ್ಪ ಹುಚ್ಚಕ್ಕಳಾರ್	ಎಂ.ಆರ್ 17/07–2008 ,ಕತ್ತಿಗೆ ವಿಎಸ್ ಎಸ್ ಎನ್ ಬಿ ಇವರಿಗೆ ರೂ 50000/– ಗೆ ಆಧಾರ ಎಂ ಆರ್ 19/05–06 ವಿಎಸ್ ಎಸ್ ಎನ್ ಬಿ ಕತ್ತಿಗೆ ಇವರಿಗೆ 30000/– ರೂ.ಗೆ ಆಧಾರ	ಸ್ವಂತ	23/2	ಖುಷ್ಕಿ	24	22	ರಸ್ತೆ	ಹಳ್ಳಿ ಗಡಿ	0–22	1–08	–	–	–
										0–22				

ಜುಮ್ಲಾ ಇಪ್ಪತ್ತೆರಡು ಗುಂಟೆ ಮಾತ್ರ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಎಂ. ಶಿರೋಳ, ಐ.ಎ.ಎಸ್.

ಆಯುಕ್ತರು,

ಪುನರವಸತಿ ಹಾಗೂ ಭೂಸ್ವಾಧೀನ ಕೃ.ಮೇ.ಯೋ. ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ,

ಕಂದಾಯ ಇಲಾಖೆ, ಬಾಗಲಕೋಟೆ.

ಪಿ.ಆರ್.436

ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆರವರ ಕಾರ್ಯಾಲಯ,

ಭೂ ಅರ್ಜನೆ ಅಧಿನಿಯಮದ 48(1)ನೇ ಪ್ರಕರಣದ ಮೇರೆಗಿನ ಅಧಿಸೂಚನೆ

ಪ್ರಕರಣ ಸಂಖ್ಯೆ: ಎಲ್‌ಎಕ್ಯೂ/ವಿವ/2/10–11, ದಿನಾಂಕ:11ನೇ ನವೆಂಬರ್, 2010

ಕರ್ನಾಟಕ ಸರ್ಕಾರದ ತಿದ್ದುಪಡಿಯಾದ ಭೂ ಅರ್ಜನೆ ಅಧಿನಿಯಮ, 1984 (ಕೇಂದ್ರ ಅಧಿನಿಯಮ ಸಂಖ್ಯೆ: 1, 1894) ಕಲಂ 48(1)ರಂತೆ ದತ್ತವಾದ ಅಧಿಕಾರದನ್ವಯ, ಹರಪನಹಳ್ಳಿ ಪಟ್ಟಣಕ್ಕೆ ಒಳಚರಂಡಿ ಯೋಜನೆಯಡಿ ಕೊಳಚೆ ನೀರು ಶುದ್ಧೀಕರಣ ಘಟಕದ ನಿರ್ಮಾಣದ ಉದ್ದೇಶಕ್ಕಾಗಿ ಈ ಕೆಳಕಂಡ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಜಮೀನುಗಳನ್ನು ಭೂ ಸ್ವಾಧೀನಪಡಿಸಿಕೊಳ್ಳಲು ಭೂ ಅರ್ಜನೆ ಅಧಿನಿಯಮ, ಕಲಂ 4(1)ರ ಪ್ರಕಾರ ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಲ್‌ಎಕ್ಯೂ/ವಿವ/1/10–11 ದಿನಾಂಕ:07.06.2010ರಂತೆ ಕರ್ನಾಟಕ ರಾಜ್ಯಪತ್ರ ಭಾಗ–6 ಪುಟಸಂಖ್ಯೆ:748 ಮತ್ತು 749 ದಿನಾಂಕ:17.06.2010ರಲ್ಲಿ ಪ್ರಕಟಗೊಂಡ ಅಧಿಸೂಚನೆಯನ್ನು ಹಿಂದಕ್ಕೆ ಪಡೆಯಲಾಗಿದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಅನುಸೂಚಿ

ಜಿಲ್ಲೆ: ದಾವಣಗೆರೆ ತಾಲ್ಲೂಕು: ಹರಪನಹಳ್ಳಿ ಹೋಬಳಿ: ಕಸಬಾ ಗ್ರಾಮ: ನಾರಾಯಣಪುರ

ಕ್ರ. ಸಂ.	ಖಾತೆದಾರರ–ಅನುಭವದಾರರ–ಹಿತಾಸಕ್ತಿ ಹೊಂದಿರುವವರ ಹೆಸರು	ತರಹೆ	ಸರ್ವೆ ನಂ.	ಚಕ್ಕುಬಂದಿ				ಅಗತ್ಯವಾದ ಅಂದಾಜು ವಿಸ್ತೀರ್ಣ ಎ.ಸೆಂ.	ಆಕಾರ ರೂ.ಪೈ.
				ಪೂರ್ವ ಸ.ನಂ.	ಪಶ್ಚಿಮ ಸ.ನಂ.	ಉತ್ತರ ಸ.ನಂ.	ದಕ್ಷಿಣ ಸ.ನಂ.		
1	2	3	4	5	6	7	8	9	10
1.	ಹಳ್ಳ	–	303	304, 305	302, 300	299	318	3.81	–
2.	ರಾಮಪ್ಪ ಬಿನ್ ಜೋಗಿನ ಕೆಂಚಪ್ಪ, ಹ.ಹಳ್ಳಿ	ಖುಷ್ಕಿ	304	287	305	303	305	2.90	2.61
3.	ಜೋಗಿನವ ಬಸಪ್ಪ ಬಿನ್ ಬಸಪ್ಪ, ಹ.ಹಳ್ಳಿ	ಖುಷ್ಕಿ	305/ಎ	304	303	303	305/ಸಿ	4.73	4.26
4.	ಜೋಗಿನ ಕೆಂಚಪ್ಪ ಬಿನ್ ವರಗಬಸಪ್ಪ, ಹ.ಹಳ್ಳಿ	ಖುಷ್ಕಿ	305/ಬಿ	305/ಎ	305/ಎ	305/ಎ	305/ಸಿ	0.01	0.01
5.	ಜೋಗಿನ ಕೆಂಚಪ್ಪ ಬಿನ್ ವರಗಬಸಪ್ಪ, ಹ.ಹಳ್ಳಿ	ಖುಷ್ಕಿ	305/ಸಿ	287, 305/ಡಿ	303, 305/ಎ	304, 305/ಎ	306, 307	6.57	5.92
6.	ಜೋಗಿನವರಗ ಬಸಪ್ಪ ಬಿನ್ ಬಸಪ್ಪ, ಹ.ಹಳ್ಳಿ	ಖುಷ್ಕಿ	305/ಡಿ	287	305/ಸಿ	305/ಸಿ	307	1.49	1.35
							ಒಟ್ಟು	**19.51**	**14.15**

ಜಿಲ್ಲಾಧಿಕಾರಿಗಳು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.430

ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ

ಭೂ ಅರ್ಜನೆ ಅಧಿನಿಯಮ 4(1)ನೇ ಪ್ರಕರಣದ ಮೇರೆಗಿನ ಅಧಿಸೂಚನೆ

ಸಂಖ್ಯೆ: ಎಲ್‌ಎಕ್ಯೂ:ಸಿಆರ್:36/10–11, ದಿನಾಂಕ:11ನೇ ನವೆಂಬರ್, 2010

ಇದರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಭೂಮಿಗಳು ಸಾರ್ವಜನಿಕ ಉದ್ದೇಶಕ್ಕಾಗಿ ಎಂದರೆ: ಜಗಳೂರು ಮತ್ತು ಹರಪನಹಳ್ಳೀ ತಾಲ್ಲೂಕುಗಳ 22 ಕೆರೆಗಳನ್ನು ತುಂಬಿಸುವ ಕಾಮಗಾರಿಯ ಜಾಕ್‌ವೆಲ್–2, ಪಂಪ್‌ಹೌಸ್ ನಿರ್ಮಿಸಲು ಅಗತ್ಯವಾಗಿದೆಯೆಂದು ಕರ್ನಾಟಕ ಸರ್ಕಾರಕ್ಕೆ ಕಂಡುಬಂದಿರುವುದರಿಂದ

ಕರ್ನಾಟಕ ಅಧಿನಿಯಮ 1961ರ 17ರ ಮೂಲಕ ತಿದ್ದುಪಡಿಯಾದ ಭೂ ಅರ್ಜನೆ ಅಧಿನಿಯಮ 1894 (ಕೇಂದ್ರ ಅಧಿನಿಯಮ ಸಂಖ್ಯೆ: 1894ರ ನೇ ಪ್ರಕರಣದ (1) ಉಪಪ್ರಕರಣದ ಉಪಬಂದಗಳ ಅನುಸಾರವಾಗಿ, ಅದಕ್ಕೆ ಸಂಬಂಧಪಟ್ಟ ಎಲ್ಲರಿಗೂ ಆ ಬಗ್ಗೆ ಈ ಮೂಲಕ ನೋಟೀಸನ್ನು ಕೊಡಲಾಗಿದೆ ಹಾಗೂ ಕರ್ನಾಟಕ ಸರ್ಕಾರವು ಅಧಿನಿಯಮದ 4(2)ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ವಿಶೇಷ ಭೂ ಅರ್ಜನೆ ಅಧಿಕಾರಿ ಅವರ ಸಿಬ್ಬಂದಿ ಹಾಗೂ ಕೆಲಸಗಾರರಿಗೆ ಈ ಮೂಲಕ ಅಧಿಕಾರ ನೀಡುತ್ತದೆ.

ಸದರಿ ಅಧಿನಿಯಮದ 3(ಸಿ) ಪ್ರಕರಣದ ಮೇರೆಗೆ ಕರ್ನಾಟಕ ಅಧಿನಿಯಮದ 5ಎ ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಯವರ ಪ್ರಕಾರ್ಯಗಳನ್ನು ನಿರ್ವಹಿಸಲು ಉಪವಿಭಾಗಾಧಿಕಾರಿ, ದಾವಣಗೆರೆ ಉಪವಿಭಾಗ, ಇವರನ್ನು ನೇಮಕ ಮಾಡಿದೆ.

ಭೂಮಿಗಳಲ್ಲಿ ಹಿತಾಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಯು ತನ್ನ ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ಮೂವತ್ತು ದಿವಸಗಳೊಳಗಾಗಿ ಅಥವಾ ಅದಕ್ಕೆ ಮುಂದೆ ಕರ್ನಾಟಕ ಅಧಿನಿಯಮ 1961ರ 17ರ ಮೂಲಕ ತಿದ್ದುಪಡಿಯಾದ ಭೂ ಅರ್ಜನೆ ಅಧಿನಿಯಮ 1894 3(ಸಿ) ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಯವರ ಪ್ರಕಾರ್ಯಗಳನ್ನು ನಿರ್ವಹಿಸಲು ನೇಮಕವಾದ ಉಪವಿಭಾಗಾಧಿಕಾರಿ ಹಾಗೂ ಭೂ ಸ್ವಾಧೀನಾಧಿಕಾರಿ, ದಾವಣಗೆರೆ ಉಪವಿಭಾಗ ಇವರಿಗೆ ಲಿಖಿತ ಮೂಲಕ ಸಲ್ಲಿಸಬಹುದು.

ಸದರಿ ಭೂ ಅರ್ಜನೆ ಉದ್ದೇಶಕ್ಕಾಗಿ ಸದರಿ ಭೂಮಿಗಳ ಮೇಲೆ ನಿಯೋಜಿತರಾದ ಯಾವುದೇ ಮೋಜಿಣಿದಾರರ ಅಥವಾ ಇತರ ವ್ಯಕ್ತಿಗಳಿಗೆ ಅಡ್ಡಿಯನ್ನುಂಟು ಮಾಡಬಾರದೆಂದು ಅಥವಾ ಅವರ ಕಾರ್ಯದಲ್ಲಿ ಹಸ್ತಕ್ಷೇಪ ಮಾಡಬಾರದೆಂದು ಸದರಿ ಭೂಮಿಗಳಲ್ಲಿ ಹಿತಾಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ. ಈ ಅಧಿಸೂಚನೆಯು ಪ್ರಕಟವಾದ ದಿನಾಂಕದ ನಂತರ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಅನುಮತಿ ಇಲ್ಲದೇ ಮಾರಾಟ, ಗುತ್ತಿಗೆ, ಅಡಮಾನ, ವಿನಿಮಯದ ಮೂಲಕ ಸದರಿ ಭೂಮಿಗಳ ವಿಲೇಗಾಗಿ ಮಾಡಿಕೊಂಡ ಯಾವುದೇ ಕರಾರುಗಳನ್ನು ಅಥವಾ ಅದರಲ್ಲಿ ಮಾಡಲಾದ ವೆಚ್ಚ ಅಥವಾ ಅಭಿವೃದ್ಧಿಗಳನ್ನು ಅಂತಿಮವಾಗಿ ಭೂ ಅರ್ಜನೆ ಮಾಡಿಕೊಳ್ಳಲಾಗುವ ಸದರಿ ಭೂಮಿಗಳ ಅಂತಹ ಭಾಗಗಳಿಗೆ ಪರಿಹಾರಕ್ಕಾಗಿ ನಿರ್ಧರಣೆ ಮಾಡುವ ಅಧಿಕಾರಿಯ ಸದರಿ ಅಧಿನಿಯಮ (ಏಳನೇ ಖಂಡದ) 2ನೇ ಪ್ರಕರಣದ ಮೇರೆಗೆ ಗಣನೆಗೆ ತೆಗೆದುಕೊಳ್ಳಬಾರದು.

ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿ, ದಾವಣಗೆರೆ ಇವರ ಕಛೇರಿಯಲ್ಲಿ ಭೂಮಿಗಳ ಸ್ಥೂಲ ನಕಾಶೆಯನ್ನು ಇಡಲಾಗಿದೆ.

ಅನುಸೂಚಿ

ಜಿಲ್ಲೆ: ದಾವಣಗೆರೆ **ತಾಲ್ಲೂಕು: ದಾವಣಗೆರೆ** **ಹೋಬಳಿ: ಆನಗೋಡು** **ಗ್ರಾಮ: ಮಲ್ಲಶೆಟ್ಟಿಹಳ್ಳಿ**

ಕ್ರ. ಸಂ.	ವಿವರಣೆಯೊಂದಿಗೆ ಕ್ರ.ಸಂ. ಅಥವಾ ನಿವೇಶನ ಸಂ.	ಖಾತೆದಾರರ–ಅನುಭವದಾರರ ಅಥವಾ ಗೇಣಿದಾರರ: ಅಥವಾ ಹಿತಾಸಕ್ತಿ ಹೊಂದಿರುವ ಇತರೆ ವ್ಯಕ್ತಿಯ ಹೆಸರು	ರಿ.ಸಂ. ನಂಬರ್	ತರಹೆ	ಚಕ್ಕುಬಂದಿ				ಅಗತ್ಯವಾದ ಅಂದಾಜು ವಿಸ್ತೀರ್ಣ ಎ.ಗುಂ.	ಷರಾ
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ		
1	2	3	4	5	6	7	8	9	10	11
1.		ಬಸವರಾಜಪ್ಪ, ದೊಡ್ಡಶಿದ್ದಪ್ಪ ಆವರಗೆರೆ ಮಲ್ಲಿಕಾರ್ಜುನಪ್ಪ, ಮಲ್ಲಪ್ಪ, ಶಿದ್ದನೂರು ಮಹಾದೇವಪ್ಪ	16	ಖುಷ್ಕಿ	24	17	23, 24	16ರ ಉಳಿದ ಜಮೀನು	4–00	

ಜಿಲ್ಲಾಧಿಕಾರಿಗಳು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.431